International Journal of Kannada Research
www.kannadajournal.com

ISSN: 2454–5813
IJKR 2023; 9(2): 175-178
© 2023 IJKR
www.kannadajournal.com
Received: 06-05-2023
Accepted: 09-06-2023

**ಮಹೇಶ್ ಯು.ಸಿ**
ಸಹಾಯಕ ಪ್ರಾಧ್ಯಾಪಕರು,
ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜು,
ಚಿಕ್ಕಮಗಳೂರು, ಕರ್ನಾಟಕ, ಭಾರತ

**Corresponding Author:**
**ಮಹೇಶ್ ಯು.ಸಿ**
ಸಹಾಯಕ ಪ್ರಾಧ್ಯಾಪಕರು,
ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜು,
ಚಿಕ್ಕಮಗಳೂರು, ಕರ್ನಾಟಕ, ಭಾರತ

# ಗೀತಾ ನಾಗಭೂಷಣ್ ಅವರ ಕತೆಗಳಲ್ಲಿ ಮತ್ತು ಸವಿತಾ ನಾಗಭೂಷಣ್ ಅವರ ಕಾವ್ಯಗಳಲ್ಲಿ ಪ್ರತಿರೋಧದ ನೆಲೆಗಳು

**ಮಹೇಶ್ ಯು.ಸಿ**

## ಪೀಠಿಕೆ

ಆಧುನಿಕ ಕನ್ನಡ ಮಹಿಳಾ ಸಾಹಿತ್ಯದಲ್ಲಿ ಗೀತಾ ನಾಗಭೂಷಣ್ ಮತ್ತು ಸವಿತಾ ನಾಗಭೂಷಣ್ ಅವರುಗಳ ಹೆಸರುಗಳು ಪ್ರಮುಖವಾದವುಗಳು.

ಒಂದು ವಿಶಿಷ್ಟವಾದ ಮತ್ತು ಅಪರೂಪದ ಹೆಸರು ಡಾ. ಗೀತಾ ನಾಗಭೂಷಣ್ ರವರದು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ, ಕನ್ನಡ ವಿಶ್ವವಿದ್ಯಾಲಯ ಹಂಪಿ ಇಲ್ಲಿಂದ ನಾಡೋಜ ಪ್ರಶಸ್ತಿ ಪಡೆದ ಕನ್ನಡದ ಮೊಟ್ಟ ಮೊದಲ ಮಹಿಳಾ ಸಾಹಿತಿ ಡಾ. ಗೀತಾ ನಾಗಭೂಷಣ್ ರವರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಥಮ ಮಹಿಳಾ ಅಧ್ಯಕ್ಷರಾಗಿದ್ದವರು.

ಕನ್ನಡ ಸಾಹಿತ್ಯದಲ್ಲಿ ಬಂಡಾಯ ಬರಹಗಾರ್ತಿಯೆಂದೇ ಹೆಸರು ಪಡೆದ ಇವರು ತಮ್ಮ ಸಾಹಿತ್ಯ ಕೃತಿಗಳಲ್ಲಿ ಹೈದ್ರಾಬಾದ್ ಕರ್ನಾಟಕದ ಹಳ್ಳಿಯ ಭಾಷೆಯ ಸೊಗಡನ್ನು ಯಥಾವತ್ತಾಗಿ ದುಡಿಸಿಕೊಂಡ ಅಪ್ರತಿಮ ಸಾಧಕಿ. ಕನ್ನಡದಲ್ಲಿ ಕೊಳಗೇರಿಗಳ ಜೀವನದ ನಿಜವಾದ ಬದುಕನ್ನು ಯಥಾ ರೀತಿಯಲ್ಲಿ ಕಟ್ಟಿಕೊಟ್ಟ ಮಹಿಳಾ ಸಾಹಿತಿ. ಯಾರ ಮರ್ಜಿ ಮುಲಾಜುಗಳಿಗೆ ಮಣಿಯದೆ ತಮ್ಮತನವನ್ನು ಕಾಯ್ದುಕೊಂಡು ಬದುಕಿನ ಚಿತ್ರಣವನ್ನು ಸಾಹಿತ್ಯದ ಮೂಲಕ ತೋರಿಸಿದ ಅಪ್ರತಿಮ ಧೀರ ಮಹಿಳೆ. ಹಾಗೆಯೇ ತನ್ನಂತಯೇ ಸಾಹಿತ್ಯ ರಚಿಸುವ ಹೊಸ ಆಲೋಚನಾ ಪರವಾದ ಅನೇಕ ಬರಹಗಾರ್ತಿಯರಿಗೆ ದಾರಿದೀಪ.

ದಲಿತ ಬದುಕಿನ, ಶೂದ್ರ ಜಗತ್ತಿನ ಅಮಾಯಕ ಅನಕ್ಷರಸ್ಥ ಮಹಿಳೆಯರ, ಜನರ ಶೋಷಣೆ, ನೋವು, ಅಪಮಾನ, ಅವಮಾನ, ದೌರ್ಜನ್ಯ ಹೀಗೆ ಶೋಷಣೆಯ ಅನೇಕ ಮುಖಗಳಿಗೆ ಬಂಡಾಯವೆದ್ದು ಪ್ರತಿರೋಧಿಸಿದ ಅನೇಕ ವಿಚಾರಗಳಿಗೆ ಪ್ರತ್ಯಕ್ಷ ಸಾಕ್ಷಿಯೆಂಬಂತೆ ಸಾಹಿತ್ಯ ರಚಿಸಿದ್ದಾರೆ. ಇಡೀ ಆಧುನಿಕ ಕನ್ನಡ ಸಾಹಿತ್ಯದ ದಲಿತ–ಬಂಡಾಯ ಚಿಂತಕರಲ್ಲಿ ಮೊದಲ ಸಾಲಿನಲ್ಲಿಯೇ ಗುರುತಿಸುವ ಪ್ರಮುಖ ಬರಹಗಾರ್ತಿ, ಕಾದಂಬರಿಗಾರ್ತಿ, ಕಥಾಗಾರ್ತಿ. ಇವರು ರಚಿಸಿರುವ ಸಾಕಷ್ಟು ಕತೆ, ಕಾದಂಬರಿಗಳಲ್ಲಿ ಮಹಿಳೆಯರೇ ಪ್ರಮುಖರು. ಸಮಾಜದ ಕೆಳಸ್ತರದ ಮಹಿಳೆಯರ ಪಾಡನ್ನು ಅವರು ಸವೆಸಿದ ದಾರಿಯನ್ನು, ಅವರು ಅನುಭವಿಸಿದ ಅಪಮಾನ ಅವಮಾನಗಳನ್ನು ಬಂಡಾಯ ರೀತಿಯಲ್ಲಿ ಪ್ರತಿಭಟಿಸಿದ, ಪ್ರತಿರೋಧಿಸಿದ ಅನೇಕ ಮಹಿಳೆಯರ ಜೀವನಕ್ರಮವೇ ಇವರು ರಚಿಸಿರುವ ಸಾಹಿತ್ಯ ಕೃತಿಗಳ ವಸ್ತು.

ದಲಿತ– ಬಂಡಾಯ ಪರಂಪರೆಯಲ್ಲಿ ಬಂಡಾಯ ಸಾಹಿತ್ಯದ ಬರಹಗಾರ್ತಿಯೆಂದೇ ಗುರುತಿಸಿಕೊಂಡ ಡಾ. ಗೀತಾ ನಾಗಭೂಷಣ್ ರವರು ದಲಿತ ಬದುಕಿನ ಶೋಷಣೆಯ ನಾನಾ ಮುಖಗಳನ್ನು ತೋರಿಸುವುದಲ್ಲದೆ ಅದರ ವಿರುದ್ಧ ಸಿಡಿದೆದ್ದ ನಾಯಕಿಯರ ಅಥವಾ ಹೆಣ್ಣಿನ ಬದುಕಿನ ಪವಾಡಗಳನ್ನೆ ವಸ್ತುವಾಗಿ ಸ್ವೀಕರಿಸಿ ಇಡೀ ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಹಿಳಾ ಸಾಹಿತಿಯಾಗಿ ಗುರುತಿಸಿಕೊಂಡು ತಮ್ಮ ಸಾಹಿತ್ಯದೊಳಗೂ ಮಹಿಳಾ ಪರ ಧೋರಣೆಗಳನ್ನು ಚಿತ್ರಿಸಿದ್ದಾರೆ. ಇತ್ತೀಚಿಗಷ್ಟೇ ನಿಧನರಾದದ್ದು ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ.

ಪ್ರಸ್ತುತ ಈ ಸಂಶೋಧನಾ ಲೇಖನದಲ್ಲಿ ನಾಡೋಜ ಡಾ. ಗೀತಾ ನಾಗಭೂಷಣ್ ರವರ ಕಥಾ ಸಂಕಲನವಾದ 'ಅವ್ವ ಮತ್ತು ಇತರ ಕತೆಗಳು' ಸಂಕಲನದ ಕತೆಗಳಲ್ಲಿ ಬರುವ ಪ್ರತಿರೋಧದ ವಿವಿಧ ಮುಖಗಳನ್ನು ಪರಾಮರ್ಶಿಸಲಾಗಿದೆ.

ಹೇಳಿ ಕೇಳಿ ಬಂಡಾಯ ಲೇಖಕಿ. ಇವರ ವಿಷಯ ವಸ್ತುವೇ ಬಂಡಾಯ, ಪ್ರತಿಭಟನೆ ಇಲ್ಲವೆ ಪ್ರತಿರೋಧ. ಪುರುಷರಷ್ಟೇ ಅಲ್ಲದೆ ಹೆಣ್ಣು ಕೂಡ ಬಂಡಾಯವೆದ್ದು ಸಮಾಜದಲ್ಲಿ ಅನ್ಯಾಯಗಳಿಗೆ ಸೆಡ್ಡು ಹೊಡೆದು ಬದಲಾವಣೆಯ ಸಂಕೇತ ಸಾರುವ ಸೂಕ್ಷ್ಮ ಸಂದೇಶ ಸಾರುವ ವಸ್ತುವನ್ನು ತಮ್ಮ ಕತೆಗಳಲ್ಲಿ ಹಿಡಿದಿಟ್ಟಿದ್ದಾರೆ. ಬೇರೆ ಬೇರೆ ಕತೆಗಳಲ್ಲಿ ಹೆಣ್ಣಿನ ಚಿತ್ರಣವನ್ನೇ ಪ್ರಧಾನವಾಗಿ ಗುರುತಿಸಿದರೂ ಗಂಡಿನ ಬದುಕಿನ ಬಸವಳಿದ ಜಿವನದ ಚಿತ್ರಣವೂ ಒಂದರ ಹಿಂದೆ ಮತ್ತೊಂದರಂತೆ ಸಾಗುವ ಘಟನೆಗಳಿಗೆ ಮೂಕ ಸಾಕ್ಷಿಯಾಗಿವೆ. ಆದರೆ ಹೆಚ್ಚಿನವು ಹೆಣ್ಣುಗಳೇ ಶೋಷಿತರು. ಆ ಶೋಷಿತ ಹೆಣ್ಣುಗಳು ತೆಗೆದುಕೊಳ್ಳುವ ನಿರ್ಧಾರಗಳು ಪ್ರತಿರೋಧಗಳೇ ಆಗಿವೆ.

ಪುರುಷ ಸಮಾಜದ ದಬ್ಬಾಳಿಕೆ ದೌರ್ಜನ್ಯಗಳನ್ನು ಕಂಡು ಸಿಡಿದೆದ್ದು ನಿಲ್ಲುವ ಅನೇಕ ಧ್ವನಿಗಳಿಗೆ ಧ್ವನಿಕೊಟ್ಟು ನಿಲ್ಲಿಸುವ ಸಾಹಿತ್ಯ ರಚನೆ ಇವರದು. ಬಹು ಅಂತಸ್ತಿನ ಬಹುಸ್ತರದ ಈ ಸಮಾಜದಲ್ಲಿ ಕೇವಲ ಮೇಲ್ಜಾತಿಯ, ಮೇಲ್ವರ್ಗದ ಪುರೋಹಿತ ಜಾತಿ ಮತ್ತು ವರ್ಗಗಳು ಮಾತ್ರ ದೇವಾಲಯದ ಅರ್ಚಕರಾಗಿ ಸೇವೆ ಸಲ್ಲಿಸಿ ಸಂಪಾಧಿಸಿ ತಾವು ಮಾತ್ರ ಉದ್ಧಾರವಾಗಬೇಕಿಲ್ಲ, ಕೆಳಜಾತಿಯವರು ಕೂಡ ದೇವಸ್ಥಾನದ ಅರ್ಚರಾಗಬೇಕೆಂಬ ಬದಲಾವಣೆಯ ಪ್ರತಿರೋಧ ಬಂದದ್ದು ಅದೇ ಊರಿನ ಸಾಹುಕಾರನ ಮಗನೇ ಜಿಲ್ಲಾಧಿಕಾರಿಯಾಗಿ ಬಂದು ಅರ್ಚಕರ ಹುದ್ದೆಗೆ ಅರ್ಜಿ ಕರೆದು ಅಲ್ಲಿಯೇ ಬಿಟ್ಟಿ ಮಾಡುತ್ತಿದ್ದ ಕೆಳಜಾತಿಯವನನ್ನೇ ಅರ್ಚಕನನ್ನಾಗಿ ಮಾಡಿ ಮೇಲು ಜಾತಿಯವನನ್ನು ಪೂಜೆಗೆ ಹೂ ತರುವ ಕೆಲಸಕ್ಕೆ ನೇಮಿಸಿದ ಕತೆ 'ಮಂಡಿ ಪೂಜಾರಿಯಾದಾಗ'.

ಅರ್ಚಕ ಸ್ಥಾನದಲ್ಲಿ ನಿಲ್ಲುವ ಮೇಲುಜಾತಿಯವರ ಹುನ್ನಾರಗಳನ್ನು ಬಯಲಿಗೆಳವಂತೆ ಮಾಡಿ ಭಕ್ತಿಯ ಹೆಸರಿನಲ್ಲಿ ಊರಿನ ಜನರ ಬದುಕನ್ನು, ದೇವರ ಹಣವನ್ನು ಭಕ್ಷಿಸುವ ಭಂಡರ ಯೋಜನೆಗಳನ್ನು ಎಳೆ ಎಳೆಯಾಗಿ ಎಳೆವ ಕತೆ ಪ್ರಮುಖವಾದುದು. ಕೆಳಜಾತಿಯನೊಬ್ಬ ಮೇಲಾಧಿಕಾರಿಯಾಗಿ ಬಂದರೂ ಊರಿನ ಪದ್ಧತಿಗಳನ್ನು ಮಾರ್ಪಡಿಸುವುದು ಕಷ್ಟಕರ. ಅಂತಹ ಸನ್ನಿವೇಷದಲ್ಲಿ ಕೆಳಜಾತಿಯ ಮಂಡಿಯನ್ನು ಆಯ್ಕೆಮಾಡಿ ಮೇಲಿನವರ ದಬ್ಬಾಳಿಕೆ ಪ್ರತಿರೋಧ ಒಡ್ಡಿದ ಕತೆ ಮುಖ್ಯವಾಗಿದೆ. ಅಲ್ಲದೆ ದೇವರಿಗೆ ಹರಕೆಯಾಗಿ ಬರುವ ಒಡವೆಗಳನ್ನು ಊರಿನ ಮುಖಂಡರ ಮನೆಯಲ್ಲಿರಿಸಿದರೆ ಅದೇ ಒಡವೆಗಳನ್ನೇ ಧರಿಸಿ ಸಿಂಗರಿಸಿಕೊಳ್ಳುವ ಮುಖಂಡನ ಹೆಂಡತಿಯ ಬಗ್ಗೆ ಪರೋಕ್ಷವಾಗಿ ಮಾತನ್ನಾಡುವ ಊರಿನ ಇತರೆ ಹೆಣ್ಣುಗಳ ಪ್ರತಿರೋದವನ್ನು ಕಾಣಬಹುದು.

'ಮತ್ತೆ ಅದೇ ಕತೆ' ಎಂಬ ಕತೆಯಲ್ಲಿ ಕಾರ್ಮಿಕನೊಬ್ಬ ದಲಿತರ ಪರ ನಿಂತು ಕೊಳೆತು ನಾರುತ್ತಿರುವ ಈ ವ್ಯವಸ್ಥೆಯ ವಿರುದ್ಧ ಧನಿಯೆತ್ತಿ ಹಾಡುವಾತ. ದಲಿತರ ಪರ ಗಟ್ಟಿ ಕಾಳಜಿ ವಹಿಸುವಾತ, ಹಾಡಿನ ಮೂಲಕ ಜನಮಾನಸದಲ್ಲಿ ಅಮರ ಚಿಂತನೆಗಳನ್ನು ಬಿತ್ತಿದಾತ. ನೇರವಾಗಿ ವ್ಯವಸ್ಥೆಯನ್ನು ಪ್ರತಿಭಟಿಸಲು ಸಾಧ್ಯವಾಗದಿದ್ದಾಗ ತನ್ನ ಪ್ರತಿರೋಧವನ್ನು ಹಾಡಿನ ಮೂಲಕ ವ್ಯಕ್ತಪಡಿಸಿದಾತ. ಆದರೆ ಒಂದು ದಿನ ಮೇಲಿನವರ ಅಟ್ಟಹಾಸದೊಳಗೆ ಕೊಲೆಯಾಗಿ ಹೋಗಿದ್ದು ಮಾತ್ರ ದುರಂತ. ಆ ಪಾತ್ರಧಾರಿಯ ಹೆಸರು ಲೋಕರೆ. ಆತ ಬದಲಾವಣೆ ಬಯಸಿದ್ದ.

ಮಹಿಳಾ ಲೇಖಕಿಯಾಗಿ, ಕಾದಂಬರಿಗಾರ್ತಿಯಾಗಿ ಕತೆಯೊಳಗೆ ಮಹಿಳೆಯ ಬದುಕನ್ನು ಚಿತ್ರಿಸಿದ ಕತೆ 'ಅವ್ವ'. ಬಡತನದ ಬೇಗೆಯಲ್ಲಿ ಬೆಯ್ಯುವ ಗಂಗಾಳಿಗೆ ಒಂದು ಕಾಯಿಲೆಯಿಂದ ನರಳುವ ಮಗು. ಆ ಮಗುವನ್ನು ಬದುಕಿಸಲು ಉಚಿತವೆಂಬ ಸಾರ್ವಜನಿಕ ಆಸ್ಪತ್ರೆಗೆ ಕರೆತಂದಳು. ಹೆಸರಿಗೆ ಉಚಿತವಾದರೂ ಅನುಚಿತ ವ್ಯವಹಾರ. ಹಣ ನೀಡಿದರಷ್ಟೆ ಸಾರ್ವಜನಿಕ ಆಸ್ಪತ್ರೆಯ ಸೌಲಭ್ಯವೆಂಬುದರ ಅರ್ಥ ಅಲ್ಲಿಗೆ ಹೋದವರಿಗೆ ತಿಳಿಯುವುದು ಲಂಚಕೋರತನ ಎಷ್ಟಿದೆ ಎಂಬುದರ ನಿದರ್ಶನ. ಔಷಧಿಯನ್ನು ತರಲು ಹಣವಿಲ್ಲದಿದ್ದಾಗ ಕಂಡುಕೊಂಡ ಅಡ್ಡದಾರಿ ಹಾಗೂ ಅನಿವಾರ್ಯ ದಾರಿ. ಅನಿವಾರ್ಯ ಹಾದಿಯಲ್ಲಿ ಶ್ರೀಮಂತರ ಕಾಮದಾಹ. ಕಾಮದಾಹಕ್ಕೆ ಹಣದ ಮೋಹ ಹಣದ ಮೋಹಕ್ಕೆ ಗಂಗಾಳ ವಶ. ಔಷಧಿಗೆ ಫಲ ಅನೈತಿಕ ಸಂಬಂಧದ ಹಣ. ಹಣ ಹೊಂದಿಸಿದರೂ ಉಳಿಯದ ಮಗುವಿನ ಪ್ರಾಣ. ಬಡವರ ಪ್ರಾಣಕ್ಕೆ ಬೆಲೆಯೆಲ್ಲಿ ಎಂದು ಗೋಳಾಟ ಪುನಃ ಒಂಟಿತನ. ಅದೇ ಸಾಹುಕಾರನ ಆಗಮನ, ಅದೇ ಹಣದ ಆಮಿಷ. ಆದರೆ ಈಗ ಬದಲಾದ ಗಂಗಾ ಬಲಿಯಾಗದ ಗಂಗಾ. ಕಲ್ಲಿನಿಂದ ಪ್ರಹಾರ. ಬಡವರ ಸಿಟ್ಟು ರಟ್ಟೆಗೆ ಬಂದರೆ ಆಗುವ ಪರಿಣಾಮ ಸಾಹುಕಾರನಿಗೆ ಗಾಯ. ಹೀಗೆ ಈ ಕತೆಯಲ್ಲಿ ಗಂಗಾಳ ಪ್ರತಿರೋಧವನ್ನು ಕಾಣಬಹುದು.

ಹೆಣ್ಣು ಸುಂದರವಾಗಿರುವುದೇ ತಪ್ಪಾಗಿದೆ ಅದರ ಪರಿಣಾಮ ಅನೇಕ. ಅದರಲ್ಲೂ ಕೆಳಜಾತಿಯ ಹೆಣ್ಣು ಸುಂದರವಾಗಿದ್ದರಂತೂ ಕಾಯುವ ಹಾಗೂ ಕಾಡುವ ಗಂಡೆಂಬ ರಣಹದ್ದುಗಳು. ಶ್ರೀಮಂತರಿಗೆ, ಅಧಿಕಾರಸ್ಥರಿಗೆ ಒಲುಮೆ. ಆಕೆ ಬೇರೊಬ್ಬನನ್ನು ವಿವಾಹವಾಗಿದ್ದರೂ ಆಕೆಯನ್ನು ಅನುಭವಿಸಬೇಕೆಂಬ ಹಂಬಲ. ಅದಕ್ಕಾಗಿ ತುಳಿಯುವ ಅನೇಕ ಅಡ್ಡದಾರಿಗಳು, ಹೆಣೆಯುವ ವಿವಿಧ ತಂತ್ರಗಳು, ಕಂಡುಕೊಳ್ಳುವ ವಿವಿಧ ಉಪಾಯಗಳು. ಅದರಂತೆ ಮದುವೆಯಾಗಿದ್ದ ಮಾಗಿಯನ್ನು ಅನುಭವಿಸಬೇಕೆಂಬ ಸಾಹುಕಾರ ಅದಕ್ಕೆ ಕಂಡುಕೊಂಡ ಹಾದಿ ಗಂಡನನ್ನು ಬೇರ್ಪಡಿಸುವುದು. ಗಂಡನನ್ನು ಕೊಲೆಯ ಆಪಾಧನೆಯ ಮೇಲೆ ಜೈಲು ಸೇರುವಂತೆ ಮಾಡಿ ಮಾಗಿಯನ್ನು ವರಿಸಿಕೊಳ್ಳಲು ಪ್ರಯತ್ನಿಸಿದಾಗ ಮೊದಲೇ ಅರಿತಿದ್ದ ಮಾಗಿ ಈ ಯೋಜನೆ ಸಫಲವಾಗದಂತೆ ಮಾಡಲು ಊರಿನ ದೇವರೇ ಮೈಮೇಲೆ ಬಂದಂತೆ ನಟಿಸಿ ಅನುಭವಿಸಬೇಕೆಂದು ಬಂದವರಿಗೆ ಭಯದ ಅನುಭವ ನೀಡುವ ಹೆಣ್ಣಿನ ಜಾಣ್ಮೆಯ ಕತೆ 'ಢಾಲು'. ಪುರುಷರ ಯೊಜನೆಗೆ ಪ್ರತಿಯೋಜನೆ ಮಾಡುವ ಪ್ರತಿರೋಧದ ಕತೆ. ಹೆಣ್ಣಿನ ಬೌದ್ಧಿಕತೆಯನ್ನು ತಿಳಿಸುತ್ತದೆ.

ಬದುಕುವ ದಾರಿ ಬಹಳವಿವೆ ಆದರೆ ಅದನ್ನು ಆಯ್ದುಕೊಳ್ಳುವ ಹೆಣ್ಣು ದಿಟ್ಟತನ ತೋರಬೇಕು. ಆ ದಾರಿಗೆ ಅನೇಕ ಆತಂಕಗಳು ಎದುರಾಗುತ್ತವೆ. ಆದರೆ ಸರಿಯಾದ ದಾರಿಯನ್ನು ಆಯ್ದುಕೊಳ್ಳಲು ಹೆಣ್ಣಿಗಿರುವ ತೊಂದರೆಗಳು, ಆ ತೊಂದರೆಗಳನ್ನು ಮೆಟ್ಟಿ ನಿಲ್ಲುವ ಧೈರ್ಯ ಹೆಣ್ಣಿಗಿರಬೇಕು. ಆ ಧೈರ್ಯಕ್ಕೆ ಪೂರಕವಾಗಿ ಚಿತ್ರಿಸುವ ಕತೆ 'ಚಿತ್ತಿ ಮತ್ತು ರಿಕ್ಷಾ'. ತಾಯಿಯ ಮರಣದಿಂದ ಅನಾಥಳಾಗಿ ಚಿಕ್ಕಮ್ಮಳ ಹಿಂಸೆಯಿಂದ ಮನೆಬಿಟ್ಟು ರಿಕ್ಷಾವಾಲನಿಂದ ಆರೈಕೆಗೊಂಡು ನಂತರ ಆತನೂ ಮರಣ ಹೊಂದುವುದು ಮತ್ತು ತಾನು ಪ್ರೀತಿಸಿದ ಪ್ರಿಯಕರನೂ ದುರಂತ ಮರಣಹೊಂದಿದಾಗ ತಾನು ಎದೆಗುಂದದೆ ತಾನೇ ರಿಕ್ಷಾ ಚಲಾಯಿಸಿ ಬದುಕು ಕಟ್ಟಿಕೊಂಡ ಅನಾಥ ಚಿತ್ತಿಯ ಕತೆ ಹೆಣ್ಣಿನ ಜೀವನಕ್ಕೆ ದಿಟ್ಟ ಮಹಿಳೆಯ ಕತೆ ಅಲ್ಲದೆ ಅನೇಕ ತೊಂದರೆಗನ್ನು ಪ್ರತಿರೋಧಿಸಿ ಬದುಕಿ ತೋರಿದ ಸಾಹಸ ಮಹಿಳೆಯ ಚಿತ್ರಣದ ಕತೆಯಾಗಿದೆ. ಚಿತ್ತಿ ಮತ್ತು ರಿಕ್ಷಾ ಕತೆಯಲ್ಲಿ ಬರುವ ಚಿತ್ತಿಯ ಬದುಕು ಒಬ್ಬ ಮಹಿಳೆಯ ನಿಜವಾದ ಸಮಸ್ಯೆಯ ಬದುಕು. ಆದರೆ ಹೆಣ್ಣು ಅಬಲೆಯಲ್ಲ ಸಬಲೆ ಎಂಬುದನ್ನು ನಿರೂಪಿಸಬೇಕಾಗಿದೆ. ಅದನ್ನ ಸಾಕಾರಮಾಡುವ ಅನೇಕ ಹೆಣ್ಣುಗಳಂತೆ ಸಬಲೆಯಾಗಿ ಬದುಕಿ ತೋರಿದವಳು ಚಿತ್ತಿ.

ಡಾ.ಗೀತಾನಾಗಭೂಷಣ್ ರವರು ಬಂಡಾಯ ಸಾಹಿತ್ಯ ಚಿಂತಕರು. ಅವರ ನಿಲುವೇ ಬಂಡಾಯ ಮನೋಧರ್ಮದ್ದು. ಅಲ್ಲದೆ ಇವರ ಸಾಹಿತ್ಯ ಧೋರಣೆಯೇ ಮಹಿಳಾ ಪರವಾದದ್ದು ಹಾಗಾಗಿ ಇವರು ರಚಿಸಿರುವ ಕತೆಗಳಲ್ಲಿ ಮಹಿಳೆಯೇ ಪ್ರಧಾನ ಪಾತ್ರಧಾರಿ. ಹೇಳಿಕೇಳಿ ಬಂಡಾಯ ಮನೋಧರ್ಮದ ಮಹಿಳೆಯಾದ್ದರಿಂದ ಅವರ ಚಿಂತನೆಯು ಸಹಜವಾಗಿಯೇ ಮಹಿಳಾ ಪರವಾಗಿದೆ. ಹಾಗಾಗಿಯೇ ಮಹಿಳಾಪರವಾದ ಮನೋಧರ್ಮ ಇವರ ಕತೆಯಲ್ಲಿ ಸಾಭೀತಾಗಿದೆ.

ಸಮಕಾಲೀನ ಕನ್ನಡ ಕವಯತ್ರಿಯರ ನಡುವೆ ವಿಭಿನ್ನವೂ ವಿಶಿಷ್ಟವೂ ಆದ ವ್ಯಕ್ತಿತ್ವವುಳ್ಳ ಸವಿತಾ ನಾಗಭೂಷಣ್ ಅವರು ಚಿಕ್ಕಮಗಳೂರಿನವರು. ತಮ್ಮ ವಿದ್ಯಾಭ್ಯಾಸದ ನಂತರ ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದಿದ್ದಾರೆ. ಕಾವ್ಯವನ್ನು ಧ್ಯಾನದಂತೆ, ಬಿಟ್ಟೆನೆಂದರೂ ಬಿಡದ ಮಾಯೆಯಂತೆ ಭಾವಿಸಿರುವ ಸವಿತಾ ನಾಗಭೂಷಣ್ ಕನ್ನಡದ ಮಹಿಳಾ ಸಾಹಿತ್ಯಕ್ಕೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ನಾ ಬರುತ್ತೇನೆ ಕೇಳು, ಚಂದ್ರನನ್ನು ಕರೆಯಿರಿ ಭೂಮಿಗೆ, ಹೊಳೆಮಗಳು, ಜಾತ್ರೆಯಲ್ಲಿ ಶಿವ, ನನ್ನವರ ಹಾಡು, ಕೆಂಡ ಸಂಪಿಗೆ ಇವರ ಕವನ ಸಂಕಲನಗಳು. ಸ್ತ್ರೀಲೋಕ ಕಾದಂಬರಿ, ಹೊಸದಿಕ್ಕು, ವಚನ ಚಳವಳಿ ವಿಮರ್ಶಾ ಕೃತಿಗಳು, ನಾಕು ಬೀದಿ ನಾಟಕಗಳು ಪ್ರಮುಖ ಕೃತಿಗಳು. ಇವರ ವಿಶಿಷ್ಟ ನಿರೂಪಣಾ ವಿಧಾನ ವಿಮರ್ಶಕರ ಗಮನ ಸೆಳೆದಿದೆ.

'ಸಮಕಾಲೀನ ಕನ್ನಡ ಕವಯತ್ರಿಯರ ನಡುವೆ ವಿಭಿನ್ನವೂ ವಿಶಿಷ್ಟವೂ ಆದ ವ್ಯಕ್ತಿತ್ವವನ್ನುಳ್ಳ ಸವಿತಾ ಅವರ ಕವಿತೆಗಳು ಬದುಕನ್ನು ಉತ್ಕಟವಾಗಿ ಪ್ರೀತಿಸುವ ಎಲ್ಲರ ಧ್ವನಿಯೂ ಆಗಿವೆ' ಎಂಬ ಜಿ.ಎಸ್.ಎಸ್‌ರವರ ಮಾತು ಸಹಜವಾಗಿದೆ ಎನ್ನುವಂತೆ ಕಾವ್ಯಗಳನ್ನು ರಚಿಸಿದ್ದಾರೆ. ಸ್ವಾನುಭವ, ಆತ್ಮನಿರೀಕ್ಷಣೆ, ಸದಾಕಾಲ ಒಳಿತಿನ ಕಡೆಗೆ ದೃಷ್ಟಿ, ಇಂತಹ ಉತ್ತಮ ನೆಲೆಗಟ್ಟಿನಲ್ಲಿ ಇವರ ಕವನಗಳು ಮುಖ್ಯವಾಗುತ್ತವೆ. ಅಲ್ಲದೆ ಸರಳವಾದ ಮತ್ತು ಅಗತ್ಯಕ್ಕೆ ತಕ್ಕಷ್ಟು ಭಾಷೆಯನ್ನು ಬಳಸುವ ಔಚಿತ್ಯವನ್ನು ಇವರ ಕವನಗಳಲ್ಲಿ ಕಾಣಬಹುದು.

ಹೊಳೆಮಗಳು ಕವನ ಸಂಕಲನದಲ್ಲಿ 'ಮುಕ್ಕಣ್ಣನನ್ನು ಮುಟ್ಟಿದರೆ ಎಲ್ಲರನ್ನೂ ಮುಟ್ಟಿದಂತೆಯೆ, ಎಲ್ಲರನ್ನು ಮುಟ್ಟಿದರೆ ಅವನನ್ನು ಮುಟ್ಟಿದಂತೆಯೆ ಆದ್ದರಿಂದ ಅವನನ್ನು ಮುಟ್ಟುವಂತೆ ಹಾಡುವುದೇ ನನ್ನ ಗುರಿ ನನ್ನ ಆಸೆ' ಎಂದಿದ್ದಾರೆ. ಸಾಮಾಜಿಕ ವ್ಯವಸ್ಥೆಯಲ್ಲಿ ಬಹಳ ಹಿಂದಿನಿಂದಲೂ ಗಂಡು-ಹೆಣ್ಣು ಎಂಬ ಭೇದಭಾವ ಕಂಡುಬರುವ ಅನಾರೋಗ್ಯಕರ ವಿಷಯವನ್ನು ಮನಮುಟ್ಟುವಂತೆ ತಮ್ಮ ಕವನಗಳಲ್ಲಿ ಪ್ರಶ್ನಿಸಿದ್ದಾರೆ. ಇದೇ ಕವನ ಸಂಕಲನದ 'ಮೊಟ್ಟೆ' ಎಂಬ ಕವನದಲ್ಲಿ ಮನುಷ್ಯನ ಅಹಂಕಾರದ ಬಗ್ಗೆ ಸ್ಪಷ್ಟವಾಗಿ ವಿವೇಚಿಸಿದ್ದಾರೆ. ನಿಜ ಜೀವನದಲ್ಲಿ ಈ ಅಹಂಕಾರವೆಂಬುದು ಎಷ್ಟು ಅಪಾಯಕಾರಿ ಎಂಬುದನ್ನು ತುಂಬಾ ಮಾರ್ಮಿಕವಾಗಿ ತಿಳಿಸುತ್ತಾರೆ. ಪಂಚೇಂದ್ರಿಯಗಳ ಸೆಳೆತಕ್ಕೆ ಒಳಗಾಗಿ ವಿವೇಚನೆಯನ್ನು ಕಳೆದುಕೊಂಡು ಅಹಂಕಾರವೆನ್ನುವ ಮೊಟ್ಟೆಯನ್ನು ಪಡೆದೆ ಎಂದು ಪಂಚೇಂದ್ರಿಯಗಳಿಗೆ ಹೋಲಿಸಿ ಕವನದ ಮೂಲಕ ವಿವೇಚನೆಯನ್ನು ಸಾರಿದ್ದಾರೆ. ಅಹಂಕಾರವೆಂಬುದು ಕಣ್ಣಿಗೆ ಹೊಡೆಯುವ ಮಿಂಚಿನ ಗುಣವನ್ನು ಪಡೆದಿದೆ, ಇದು ಬೇರೆಯವರನ್ನು ಸುಡುತ್ತದೆ, ರಕ್ತಸಂಬಂಧಿಗಳನ್ನು (ಕಳ್ಳುಬಳ್ಳಿ) ಹಂಚಿಕೊಳ್ಳುವುದಿಲ್ಲ, ತತ್ವ ನೀತಿಗಳ ಗೊಡವೆಯಿಲ್ಲ, ಮನುಷ್ಯನನ್ನು ಮೃಗವಾಗಿ ಪರಿವರ್ತಿಸುತ್ತದೆ, ಮೋಸ ವಂಚನೆಗಳನ್ನು ಮೈಗೂಡಿಸಿ ಮಾಯೆಯನ್ನು ಕವಿಸಿ ತನ್ನ ಶ್ರೇಷ್ಠತೆಯನ್ನು ಮೆರೆಯುತ್ತದೆ.

ಪಂಚೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಗೆ ಮತ್ತು ಚರ್ಮ ಇವು ಶರೀರದಲ್ಲಲ್ಲದೆ ಪ್ರಜ್ಞಾವಲಯದಲ್ಲೂ ಕಾರ್ಯ ನಿರ್ವಹಿಸುತ್ತವೆ. ಇವುಗಳನ್ನು ಅಹಂಕಾರವು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತದೆ. ವ್ಯಕ್ತಿಯನ್ನು ಮೆಟ್ಟಿ ತುಳಿಯುತ್ತದೆ. ಬದುಕನ್ನು ನರಕವನ್ನಾಗಿಸುತ್ತದೆ. ತಿಳಿವನ್ನು ಪೂರ್ಣವಾಗಿ ತಿರುಚುತ್ತದೆ. ಅಹಂಕಾರವೆನ್ನುವುದು ಒಂದು ಬಾರಿ ಪ್ರವೇಶಿಸಿದರೆ ಅದನ್ನು ತನ್ನ ದೇಹದಿಂದ ಹೊರಹಾಕಬೇಕೆಂದರೂ, ಅದನ್ನು ಕೊಡವಿ ಹಾಕಬೇಕೆಂದರೂ ಮತ್ತಷ್ಟು ಕೆರಳುತ್ತದೆ. ವ್ಯಕ್ತಿತ್ವವನ್ನು ದಹಿಸಿ ನಂಜಿನ (ವಿಷದ) ಗುಣವನ್ನು ಉಣಿಸುತ್ತದೆ.

ಅಹಂಕಾರ ಬಂದಿದೆಯೆಂದಾದರೆ ಇದು ಮಾಟ ಮಂತ್ರಗಳಿಗೆ ಬಗ್ಗುವುದಿಲ್ಲ ಹೋಗುವುದೂ ಇಲ್ಲ. ಹೋದಂತೆ ಎನ್ನಿಸಿದರೂ ಮುಳ್ಳಿನ ರೂಪದಲ್ಲಿ ಬಂದು ಪುನಃ ಪುನಃ ನಾಟುತ್ತದೆ. ಮೂರು ಲೋಕವನ್ನು ಇದು ನಾಶಪಡಿಸುತ್ತದೆ. ಆದರೆ ಅಹಂಕಾರ ಎಂಬ ಮೊಟ್ಟೆಯ ದಾಳಿಯಿಂದ ಬಿಡುಗಡೆ ಪಡೆಯಲು ಹೃದಯ ಕಾತರಿಸುತ್ತದೆ. ಕೊನೆಗೆ ಸ್ವಂತದ ಅರಿವಿನ ದಾರಿ ತೋರಿಸುತ್ತದೆ. ಕೊನೆಗೆ ಮಹಾನ್ ಶಕ್ತಿಯಾದ ಶಿವನಿಗೆ ಇದನ್ನು ಅರ್ಪಿಸುವುದರಿಂದ ಅಹಂಕಾರದಿಂದ ಮುಕ್ತಿ ಪಡೆಯಬಹುದೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಮತಾಂತರದ ವಿಚಾರದಲ್ಲೂ ದಿಟ್ಟ ನಿಲುವು ಹೆಣ್ಣಿನದು. ಗಂಡಿನ ತೀರ್ಮಾನವೇ ಅಂತಿಮವಲ್ಲ ಹೆಣ್ಣಿಗು ನಿರ್ಧರಿಸುವ ಹಕ್ಕಿದೆ. ಅದು ಆಕೆಯೇ ನಿರ್ಧರಿಸಬೇಕು. ಜಾತಿ, ಧರ್ಮದ ವಿಚಾರಕ್ಕೆ ಸೆಡ್ಡು ಹೊಡೆದ ಹೆಣ್ಣಿನ ನಿಲುವಿನ ಕತೆ 'ದುರಂತ'. ತಮ್ಮ ಧರ್ಮದವರಿಂದಲೇ ಜಾತಿಯ ಹೆಸರಿನಲ್ಲಿ ತುಳಿತಕ್ಕೊಳಗಾಗಿ ಕೊನೆಗೆ ಧರ್ಮವನ್ನೇ ಬಿಡಲು ತೀರ್ಮಾನಿಸಿದ ಗಂಡ ಮಲ್ಲೇಶಿ. ಕೊನೆಗೆ ಹೆಂಡತಿ ಮಾದೇವಿ ಬೇರೆ ಧರ್ಮಕ್ಕೆ ಬರಲು ಒಪ್ಪದಿದ್ದಾಗ ತಾನೊಬ್ಬನೆ ಮುಸ್ಲಿಂ ಧರ್ಮಕ್ಕೆ ಮತಾಂತರ ಹೊಂದಿ ಸಲೀಂ ಆದಾಗ ಮತಾಂತರವೊಂದೇ ಪರಿಹಾರವಲ್ಲವೆಂದು ಒಬ್ಬೊಂಟಿಗಳಾಗಿ ತನ್ನ ಧರ್ಮದಲ್ಲಿಯೇ ಉಳಿದು ಬದುಕಿ ತೋರಿದ ಮಹಿಳೆಯ ನಿಲುವನ್ನು ಕತೆಗಾರರು ಆಕೆಯ ಪ್ರತಿರೋಧದೊಂದಿಗೆ ಚಿತ್ರಿಸಿದ್ದಾರೆ. ಆಕೆ ಮರಣಿಸಿದಾಗ ಗಂಡ ಮುಸ್ಲಿಂ ಎಂದು ಮುಖ ನೋಡಲು ಅವಕಾಶ ನೀಡದ ಈ ಧರ್ಮದ ನಿಲುವನ್ನು ಪ್ರಶ್ನಿಸಿದ್ದಾರೆ.

ಹೆಣ್ಣಿನ ಪ್ರತಿರೋಧದ ಅನೇಕ ಮುಖಗಳನ್ನು ಪರಿಚಯಿಸುವ ಇವರು ತನ್ನಂತೆ ಮಗಳಾಗಬಾರದೆನ್ನುವ ನಿರ್ಧಾರ ತೆಗೆದುಕೊಳ್ಳುವ ಹೆಣ್ಣಿನ ಶೋಷಣೆಯ ಮಗದೊಂದು ಮುಖವನ್ನು ಪರಿಚಯಿಸಿದ್ದಾರೆ. ತಾನು ಸಾಹುಕಾರನ ಇಟ್ಟುಕೊಂಡ ಹೆಂಡತಿಯಾಗುವೆನು ಎಂದು ತಿಳಿದಾಗ ರೊಚ್ಚಿಗೇಳದ ಹೆಣ್ಣು ಆದರೆ ಅದನ್ನು ಹುಟ್ಟಿಸಿದ ತಂದೆಯೇ ಇನ್ನೊಬ್ಬ ಗಂಡಸ್ಸಿಗೆ ಮಗಳನ್ನು ಇಟ್ಟುಕೊಳ್ಳುವ ರೀತಿಯ ಮದುವೆಗೆ ನಿರ್ಧರಿಸಿದಾಗ ಬರುವ ರೊಚ್ಚುಕೆಚ್ಚಿನ ಆಕ್ರೋಶಗಳನ್ನು, ಪ್ರತಿರೋಧವನ್ನು, ಪ್ರತಿಭಟನೆಯನ್ನು ಎಳೆಎಳೆಯಾಗಿ ಬಿಚ್ಚಿಟ್ಟಿರುವ ಕತೆ 'ಬೆಳಕಿನೆಡೆಗೆ'. ಕೊನೆಗೆ ಗಂಡನನ್ನೇ ತೊರೆದು ಮಗಳೊಂದಿಗೆ ಕಲ್ಬುರ್ಗಿಗೆ ಬರುವ ಆಕೆಯ ಪ್ರತಿರೋಧವನ್ನು ಕಾಣಬಹುದು.

ಲೇಖಕರು ಚಿತ್ರಿಸುವ ಎಲ್ಲಾ ಹೆಣ್ಣು ಪಾತ್ರಗಳಲ್ಲೂ ಬದುಕಿನ ಸಮಸ್ಯೆಗಳನ್ನೆಲ್ಲ ಅನ್ಯಾಯ ಅತ್ಯಾಚಾರಗಳನ್ನೆಲ್ಲ ಎದುರಿಸುತ್ತ ಬದುಕುವ ಚೈತನ್ಯವಿರುತ್ತದೆ. ಬದುಕನ್ನೋದು ಸವಾಲೆಂದು ಸ್ವೀಕರಿಸಿಕೊಂಡು ಅವು ಬದುಕುತ್ತವೆ ಗೆಲ್ಲುತ್ತವೆ. ಬೇರೆಯ ಹೆಣ್ಣಿನ ಸಹವಾಸ ಮಾಡಿದ ಗಂಡಸರು ತಲೆಯೆತ್ತಿ ತಿರುಗುವಂತೆ ಹೆಂಗಸರೂ ತಿರಗಬೇಕು. ವಿದ್ಯಾವಂತ ಹುದ್ದೆವಂತ ಗಂಡುಗಳು ಹೊರಗಿನ ಮೆರಗಿನ ಬಣ್ಣಗಳು ಅಷ್ಟೆ. ಆ ಬಣ್ಣದ ಬಟ್ಟೆ ಕಳಚಿದರೆ ಎಲ್ಲರೂ ಬರೀ ಬೆತ್ತಲೆ. ಇಂಥಹ ವಿಚಾರಧಾರೆಯುಳ್ಳ, ಸಾಮಾಜಿಕ ಮೌಲ್ಯಗಳ ನಡುವೆ ಹೆಣ್ಣು ವಿಚಾರವಂತೆಯಾಗಿ, ಜಾಣೆಯಾಗಿ, ಪ್ರಜ್ಞಾವಂತೆಯಾಗಿ ಬದುಕಬೇಕೆಂಬ ನಿಲುವು ಉಳ್ಳವರು.

ಸಮಾಜದ ಕಟ್ಟು ಕಟ್ಟಳೆಗಳ ಪರಿಧಿಯನ್ನು ಭೇದಿಸಿ ಹೆಣ್ಣು ಹೊರಬರಬೇಕು. ಸುತ್ತಲಿನ ಸಮಾಜಕ್ಕೆ, ಪರಿಸರಕ್ಕೆ, ಜನರಿಗೆ ಅವರ ನಾಲಿಗೆಗಳಿಗೆ ಹೆದರಿಕೊಂಡು ತನ್ನ ಸ್ವಂತ ವ್ಯಕ್ತಿತ್ವವನ್ನು ಎಷ್ಟು ದಿನ ಅದುಮಿ ಬದುಕಬೇಕು. ಎಷ್ಟು ದಿನ ಉಸಿರುಗಟ್ಟಿ ವಿಲವಿಲ ಒದ್ದಾಡಿ ಸಾಯಬೇಕು. ಆದರೆ ವಿದ್ಯಾವಂತ ಅವಿದ್ಯಾವಂತ ಜನರೆಲ್ಲರ ವಿಚಾರ ಸರಣಿ ಬದಲಾಗದಿರುವುದು ಬೇಸರದ ವಿಚಾರ.

ಜಾತ್ರೆಯಲ್ಲಿ ಶಿವ ಕವನದಲ್ಲಿ ಶಿವನೇ ಕವಿಗೆ ವಿಶೇಷವಾದ ಶಬ್ಧಗಳನ್ನು ನೀಡಿದ್ದಾನೆ. ಕಾವ್ಯ ಮಿಮಾಂಶೆಯಲ್ಲಿ ವಿವರಿಸಿದಂತೆ ಕವಿಗೆ ಪ್ರತಿಭೆ ಮೂರನೇ ಕಣ್ಣು ಆದ್ದರಿಂದಲೇ ಕವಿಗೆ ಅದ್ಭುತವಾದ ಕಾವ್ಯ ಪ್ರಪಂಚವನ್ನು ತನ್ನ ಕವನಗಳಿಂದ ನೀಡುವ ಶಕ್ತಿ ಬಂದಿದೆಯೆಂದು ವಿವರಿಸುತ್ತಾರೆ. ಈ ಕವನವು ಒಂದು ಜಾತ್ರೆಯಲ್ಲಿ ಕವಿಯೊಂದಿಗೆ ಆ ಶಿವ ವೇಷಧಾರಿಯಾಗಿ ಪ್ರತ್ಯಕ್ಷನಾಗುತ್ತಾನೆ ಎಲ್ಲವೂ ಕೃತಕವೇ. ಎಲ್ಲರೊಂದಿಗೆ ಆ ಗಿಲೀಟಿನ ಕೃತಕ ವೇಷದ ಶಿವನಿದ್ದಾನೆ. ಅವನು ವ್ಯಾಪಾರದಲ್ಲಿ ಗ್ರಾಹಕನಾಗಿದ್ದಾನೆ. ಎಲ್ಲರಂತೆ ಅವನು ಅವನಂತೆಯೇ ಎಲ್ಲರು. ಇದ್ದಕ್ಕಿದ್ದಂತೆ ಶಿವ ವೇಷಧಾರಿ ಬಾಡಿದ ಮೊಗದಲ್ಲಿ ಹೆಂಡತಿಯ ಕಾಯಿಲೆ, ಮಗನ ಹಸಿವಿಗೆ ಬೇಡುವ ಭಿಕ್ಷೆ ಭಕ್ತನೇ ಬೆರಗುಗೊಳಿಸುತ್ತದೆ. ಜನಪದರ ಶಿವ ಭಿಕ್ಷಕ್ಕೆ ಬಂದ ಚಿತ್ರಣವಿದ್ದಂತೆ ಇಲ್ಲಿಯೂ ಭಿಕ್ಷೆ, ಭವಿ,ಶಿವ,ಕವಿ ಎಲ್ಲರೂ ಲೋಕ ವ್ಯಾಪಾರ ಮಗ್ನರು. ಅಲ್ಪ ಭಕ್ಷೀಸಿಗೆ ಅವನು ಅಭಿನಯಿಸಿದ್ದು ನಟರಾಜ ಭಂಗಿ. ಇಲ್ಲಿ ಎಲ್ಲರೂ ನಟಿಸುತ್ತಿದ್ದಾರೆ.

ನಾಸ್ತಿಕ ನಿಲುವು- ಆಸ್ತಿಕ ಭಾವದ ಸ್ತರ ಮೀರಿದ ಅನುಭವ ನೀಡುವ ಕವಿತೆಯು ಕೊನೆಯಲ್ಲಿ ಹೊಮ್ಮಿಸುವ ಸಾಕ್ಷಾತ್ ಶಿವ ! ಉದ್ಗಾರ ದರ್ಶನದ ಸ್ಪರ್ಷವನ್ನು ನೀಡಿದಂತಿದೆ. ಜಾತ್ರೆ- ಜಾತ್ರೆಯ ರೂಪಕವಾಗಿ, ವೇಷಧಾರಿ ಶಿವ ಜಗವೇ ನಾಟಕರಂಗ ಎಂಬ ರೂಪಕವಾಗಿ ಇಡೀ ಕವಿತೆ ಕ್ಷಣಕ್ಷಣಕ್ಕೂ ಅಚ್ಚರಿ ಬೆರಗುಗಳಲ್ಲಿ ರೂಪಾಂತರ ಹೊಂದುತ್ತಿರುವಂತೆ ಭಾಸವಾಗುತ್ತದೆ. ಅವನ ನಟನೆಗೆ ಕವಿಯೂ ಮೈದುಂಬಿ ಸಾಕ್ಷಾತ್ ಶಿವ ಎನ್ನುವುದು ಕುವೆಂಪು ಅವರ ಜಲಗಾರನಿಗೆ ಶಿವ ಪ್ರತ್ಯಕ್ಷನಾಗಿ 'ನಾನೇ ನೀನು ನೀನೇ ನಾನು' ಎನ್ನುವುದನ್ನು ನೆನಪಿಸುವಂತಿದೆ. ತಾತ್ವಿಕ ಭೂಮಿಕೆಯನ್ನು, ಲೌಕಿಕ ಅನುಭವವನ್ನು, ಭೌತಿಕ ಲೋಕವ್ಯಾಪಾರವನ್ನು ತುಸುಮಟ್ಟಿಗೆ ಭಾವನಾತ್ಮಕಗೊಳಿಸಿದರೆ ಏನೆಲ್ಲಾ ಆಗಬಹುದೋ ಹಾಗೆ ಆದಂತೆ ಕವಿತೆ ಕೊನೆಗೊಳ್ಳುತ್ತದೆ.

ಹೊಳೆಮಗಳು ಕೃತಿಯಲ್ಲಿ ಸವಿತಾ ಅವರು ತಮ್ಮ ಕಾವ್ಯ ಶಕ್ತಿಯನ್ನು ವಿವರಿಸುತ್ತಾ 'ಎಷ್ಟೋ ಕವಿಗಳು ಬಳಸಿ ಉಳಿದ ನಲುಗಿದ ಶಬ್ಧವನ್ನು ಶಿವ ನನಗೇ ಬಿಟ್ಟು ಹೋದದ್ದೆಂದು ಭಾವಿಸುತ್ತ'

ಆ ಒಂದು ಶಬ್ಧವೇ ನನ್ನ ಹಾಡಿನ ಜೀವ ಮತ್ತು ದೇಹ
ಆ ಒಂದು ಶಬ್ಧವೇ ನನ್ನ ಹಾಡಿನ ಮಂತ್ರ ಮತ್ತು ತಂತ್ರ
ಇದು ಕಟ್ಟು ಕತೆಯೋ, ಕನಸೋ, ಎಚ್ಚರವೋ, ಮಂಪರೋ,
ಕಲ್ಪನೆಯೋ ಅಥವಾ ಹುಚ್ಚೋ ? ಏನಿದರ ಅರ್ಥ ? !

– ಜಾತ್ರೆಯಲ್ಲಿ ಶಿವ

ಈ ಬಗೆಯ ಲೇಖಕಿಯ ಧೋರಣೆ ಜೀವನವನ್ನು ಉತ್ಕಟವಾಗಿ ಪ್ರೀತಿಸುವ ವಿಭಿನ್ನ ಬಗೆಯೆಂದು ಅರ್ಥೈಸಬಹುದು.

'ನಾ ಬರುತ್ತೇನೆ ಕೇಳು' ಕವನದಲ್ಲಿ ಹೆಣ್ಣು– ಗಂಡಿನ ಸಂಬಂಧವನ್ನು ಸ್ಪಷ್ಟವಾಗಿ ವಿವರಿಸುತ್ತಾ ಬಯಸಿದಾಗ ಬಂದು ಸಿಗುವ ವಸ್ತುವಲ್ಲ ಹೆಣ್ಣು ಅವಳನ್ನು ಪಡೆಯಬೇಕಾದರೆ ಹೂವಿನಂತಹ ಹೃದಯವಿರಬೇಕು, ಒಂದು ಬಾರಿ ಬಯಸಿ ಬಂದ ಹೆಣ್ಣನ್ನು ತಿರಸ್ಕರಿಸಿದರೆ ಪುನಃ ತಾನು ಎಷ್ಟೇ ಬಯಸಿದರೂ ಸಿಗುವುದಿಲ್ಲ ಎಂದಿದ್ದಾರೆ. ಪ್ರೀತಿಸಿದ ಹೃದಯಕ್ಕೆ ಹತ್ತಿರವಾಗಿ ನಂತರ ದೂರವಾದರೆ ಒಂದುಗೂಡುವುದು ಕಷ್ಟ. ಪ್ರೀತಿಸಿಯೂ ಪ್ರೀತಿಸಿಲ್ಲವೆಂದು ತೋರಿಕೆ ನಾಟಕವಾಡುವ ಪುರುಷರಿಗೆ ಹೆಣ್ಣೊಂದು ಸವಾಲು ಹಾಕುತ್ತಿದೆ. 'ನಾನು ಒಂದು ದಿನ ನಿನ್ನ ಕನಸಿನಲ್ಲಾದರೂ ಬರುವೆನು, ಬಂದಾಗ ನೀನು ಓಡಿಸಿದರೂ ಬಾಗಿಲ ಸಂಧಿಯಿಂದಲಾದರೂ ನೋಡುವೆನು' ಎನ್ನುವುದರಲ್ಲಿ ಹೆಣ್ಣಿನ ಮನಸ್ಥಿತಿಯನ್ನು ತಿಳಿಯಬಹುದು. ನಿನ್ನ ಕಣ್ಣು ತಪ್ಪಿಸಿಯಾದರೂ ಒಳ ನುಗ್ಗುವೆನು ಆದರೆ ನನ್ನನ್ನು 'ಹಠಮಾರಿ ಹೆಣ್ಣು' ಎಂದು ಕರೆದರೂ ಬರುವೆನು. ಹೆಣ್ಣು ಎಷ್ಟು ಆಳವಾಗಿ ಗಂಡನ್ನು ಪ್ರೀತಿಸುತ್ತಾಳೆಂದರೆ, 'ದಾರಿಬಿಡು ನಿನ್ನ ಹೃದಯದಲ್ಲಿ ನಾನಿದ್ದೇನೆಂದು ಇಣುಕಿ ನೋಡುವೆನು, ಮನಸ್ಸಿಗೆ ನೋವಾಗದ ಹಾಗೆ ಮೆಲ್ಲನೆ ನಡೆದಾಡುವೆನು' ಎನ್ನುವಾಗ ಆಕೆಯ ಕಪಟವಲ್ಲದ ಪ್ರೀತಿಯನ್ನು ಕಾಣಬಹುದು. 'ನಿನ್ನ ಹೃದಯ ಖಾಲಿ ಇದೆ ಎಂದಾದರೆ ಒಂದಷ್ಟು ಪ್ರೀತಿಯ ಹಸಿರನ್ನು ಬಿತ್ತುವೆನು, ಆದರೆ ನೀನೇ ಈಗ ತಿರಸ್ಕರಿಸಿದರೆ ನಾನು ಮತ್ತೆ ಸಿಗಲಾರೆನು' ಎನ್ನುವಲ್ಲಿ ಹೆಣ್ಣು ಮುಕ್ತಟೆ ಸಿಗುವ ವಸ್ತುವಲ್ಲ ಎಂಬ ಆಶಯಕ್ಕೆ ಪೂರಕವಾಗಿದೆ. 'ನಿನಗೆ ವಯಸ್ಸಾಗಿ ನನ್ನನ್ನು ನೆನಪು ಮಾಡಿಕೊಳ್ಳುವಾಗ ನಾನು ಸಾವಿರ ಮೈಲುಗಳಾಚೆ ಇರುವೆನು' ಎನ್ನುವಾಗ ಆಕೆಯ ಅಂತರಾಳದ ಪ್ರೀತಿ ಎಷ್ಟೆಂಬುದು ತಿಳಿಯುತ್ತದೆ.

ಅದೇ ಕವನದಲ್ಲಿ 'ನೀನೊಂದು ವೇಳೆ ನನ್ನನ್ನು ತಿರಸ್ಕರಿಸಿದರೆ ದೂರವಿರುವಾಗ ಬಾಜಾ– ಬಜಂತ್ರಿ ಮಾಡಿಸಿ ಸುಸ್ವಾಗತ ತೂಗುಹಾಕಿ ಕರೆದರೂ ತಿರುಗಿ ನೋಡುವುದಿಲ್ಲ ಎಂಬ ಮಾತಿನಲ್ಲಿ ಹೆಣ್ಣಿನ ಪ್ರತಿರೋಧವನ್ನು ಕಾಣಬಹುದು. ಎರಡೂ ಕೈ ಚಾಚಿ ಬಾ ಎಂದು ಕರೆದರೆ ಆಗ ಬರುವಳಲ್ಲ ಏಕೆಂದರೆ ಬರಲಾರದಷ್ಟು ದೂರ ನಾನು ಹೋದ ಮೇಲೆ ನೀನೆಷ್ಟೇ ಕರೆದರೂ ಬರಲಾಗುವುದಿಲ್ಲ. ಆದರೂ ಹೇಗೆ ಬರಬಹುದು ಹೇಳು' ಎನ್ನುವ ಮೂಲಕ ತನ್ನ ಅಂತರಂಗದ ಆತ್ಮೀಯ ಪ್ರೀತಿಯನ್ನು ಬಹಿರಂಗವಾಗಿ ಹೇಳುವ ಮೂಲಕ ಹೆಣ್ಣು – ಗಂಡಿನ ಸಂಬಂಧದ ಬಹುಮುಖ್ಯ ಮೌಲ್ಯವನ್ನು ತಮ್ಮ ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

ರಾಮ– ಕೃಷ್ಣ– ಶಿವ ಕವನದಲ್ಲಿ ಹೆಣ್ಣಿನ ಮನದಾಳದ ಬಯಕೆಯನ್ನು ಹೇಳುತ್ತಾ ಹೆಣ್ಣು ತನ್ನ ಹೆಣ್ತನದಲ್ಲಿ ಬಯಸುವುದಾದರೂ ಏನನ್ನು ಒಡವೆಯೋ, ಹಣವೋ ಇಲ್ಲವೆ ಭೂಮಿಯೋ ಎಂದು ಪ್ರಶ್ನಿಸುತ್ತಾ– ಇದ್ಯಾವುದೂ ಅಲ್ಲ ಇದೆಲ್ಲಕ್ಕಿಂತ ಪವಿತ್ರ ವಸ್ತು ಗಂಡ. ಗಂಡನೇ ಸರ್ವಸ್ವ, ಹೆಂಡತಿಗಾಗಿ ಪೌರಾಣಿಕ ಕತೆಗಳಲ್ಲಿ ಬರುವ ಪವಿತ್ರವೆಂಬ ಪಾತ್ರಗಳ ಮೂಲಕ ತನ್ನಿಚ್ಛೆಯನ್ನು ಸ್ವ ಇಚ್ಛೆಯನ್ನು ಬಿಂಬಿಸಿದ್ದಾರೆ.

ರಾಮಾಯಣ ಕತೆಯಲ್ಲಿ ತಾನು ಮದುವೆಯಾದ ಹೆಂಡತಿಯನ್ನು ಪರ ಪುರುಷನೊಬ್ಬ ಕರೆದೊಯ್ದಾಗ ಪುನಃ ಆಕೆಯನ್ನು ಪಡೆಯಲು ಕರೆದೊಯ್ದವನೊಡನೆ ಯುದ್ಧ ಮಾಡಿ ಆಕೆಯನ್ನು ಪಡೆದು ಹಿಂತುರುಗಿ ಬಂದಮೇಲೆ ಆಕೆ ಪರ ಪುರುಷ ಮೆಚ್ಚಿದ ಹೆಣ್ಣು ಆಕೆ ನನಗೆ ಬೇಡವೆಂದು ತಿರಸ್ಕರಿಸಿದರೂ ರಾಮನಂತಹ ಗಂಡ ಪ್ರತೀ ಹೆಣ್ಣಿನ ಗಂಡನಾಗಬೇಕು, ಪರಸ್ತ್ರೀಯನ್ನು ಮೋಹಿಸುವ ಗಂಡ ಗಂಡನೇ ಅಲ್ಲ ಆತನಲ್ಲೂ ಪಾವಿತ್ರ್ಯತೆ ಪ್ರಮುಖವಾಗಿರಬೇಕು. ಪರರು ಕಚ್ಚಿದ ಹಣ್ಣನ್ನು ತಾನು ಕಚ್ಚಬಾರದೆಂಬ ನಿಲುವನ್ನು ರಾಮನ ಪಾತ್ರದ ಮೂಲಕ ವ್ಯಕ್ತಪಡಿಸಿದ್ದಾರೆ. ಕವಯತ್ರಿಯ ದೃಷ್ಟಿಯಲ್ಲಿ ಪರರ ಹೆಂಡತಿ ಸೀತೆಯನ್ನು ಮೋಹಿಸುವ ರಾವಣನದೇ ತಪ್ಪು ಗುಣವೆಂದೂ ಇದು ಸೀತೆಯ ತಪ್ಪು ಗುಣವಲ್ಲ ಎನ್ನುವ ಮೂಲಕ ಸ್ತ್ರೀಪರವಾದ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಮಹಾಭಾರತದಲ್ಲಿ ತಂಗಿಯು ಸಂಕಷ್ಟಕ್ಕೀಡಾದಾಗ ಆಕೆಯ ನೆರವಿಗೆ ಬಂದ ಶ್ರೀಕೃಷ್ಣ ಆಕೆ ವನವಾಸ ಸಂದರ್ಭದಲ್ಲಿ ಅವರ ವಾಸಸ್ಥಾನಕ್ಕೆ ಬಂದ ಋಷಿಗಳು ಹಸಿವನ್ನು ವ್ಯಕ್ತಪಡಿಸಿದಾಗ ಮನೆಯಲ್ಲಿ ಧವಸಧಾನ್ಯಗಳೆಲ್ಲ ಖಾಲಿಯಾಗಿದ್ದಾಗ ಅವಳ ನೆರವಿಗೆ ಬಂದು ಮುನಿಗಳ ಹೊಟ್ಟೆ ತುಂಬುವಂತೆ ಮಾಡಿ ತಂಗಿ ದ್ರೌಪದಿಯ ಮಾನ ಕಾಪಾಡಿದಂತಹ ಪ್ರಿಯವಾದ ಅಣ್ಣ ನಮ್ಮ ಬಾಳಿನ ಅಣ್ಣನಾಗಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಶಿವಪುರಾಣದಲ್ಲಿ ತಂದೆಯ ಯಜ್ಞಕುಂಡಕ್ಕೆ ಬಿದ್ದು ಪ್ರಾಣಬಿಟ್ಟ ಹೆಂಡತಿ ದಾಕ್ಷಾಯಿಣಿಯನ್ನು ತನ್ನ ಹೆಗಲ ಮೇಲೆ ಹೊತ್ತು ತಿರುಗಿದ ಶಿವನಂತಹ ಗಂಡ ಹೆಣ್ಣುಗಳ ಗಂಡನಾಗಬೇಕು. ಆ ಪ್ರಕಾರದ ಪ್ರೀತಿಯನ್ನು ತೋರುವಂತಹನಿರಬೇಕೆಂದು ತನ್ನ ಕವನವಾದ ರಾಮ – ಕೃಷ್ಣ – ಶಿವ ಕವನದಲ್ಲಿ ಗಂಡು ಹೆಣ್ಣಿನ ಸಂಬಂಧದ ಮೌಲ್ಯವನ್ನು ಆತ್ಮದ ಆಕಾಂಕ್ಷೆಯನ್ನು ತಿಳಿಸಿದ್ದಾರೆ. ನಮ್ಮೆಲ್ಲರಿಗೂ ಪ್ರಿಯರಾಗಬೇಕಾಗಿರುವುದು ಒಂದು ಹೆಣ್ಣನ್ನು ಒಬ್ಬ ಪ್ರೀತಿಸಿದ ಮೇಲೆ ಆಕೆ ಇನ್ನೊಬ್ಬ ಗಂಡನ ಸ್ವತ್ತಾಗಬಾರದು ಗಂಡೂ ಕೂಡ ಅಂತಹ ಹೆಣ್ಣನ್ನು ಬಯಸಬಾರದು, ಹಾಗೆಯೇ ತಂಗಿಯ ಕಷ್ಟಕ್ಕೆ ಮಿಡಿಯುವ ಕೃಷ್ಣನಂತಹ ಅಣ್ಣನಿರಬೇಕು. ಮರಣ ಹೊಂದಿದ ಹೆಂಡತಿಯ ಹೆಣವನ್ನು ಪ್ರೀತಿಯಿಂದ ಹೊತ್ತು ತಿರುಗುವ ಶಿವನಂತಹ ಗಂಡನಿರಬೇಕೆಂಬ ಕವಯತ್ರಿಯ ಆಶಯ ಪ್ರಮುಖವಾಗಿದೆ.

ಸವಿತಾ ನಾಗಭೂಷಣ್ ರವರ ಸಾಹಿತ್ಯ ಸೇವೆಯನ್ನು ಪರಿಗಣಿಸಿದ ಕನ್ನಡದ ಮನಸ್ಸುಗಳು ನಾ ಬರುತ್ತೇನೆ ಕೇಳು ಕವನ ಸಂಕಲನಕ್ಕೆ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಹೊಳೆಮಗಳು ಕವನ ಸಂಕಲನಕ್ಕೆ ಕರ್ನಾಟಕ ಲೇಖಕಿಯರ ಸಂಘದ ಗೀತಾ ದೇಸಾಯಿ ದತ್ತಿನಿಧಿ ಪ್ರಶಸ್ತಿ, ಸ್ತ್ರೀಲೋಕ ಕಾದಂಬರಿಗೆ ಕರ್ನಾಟಕ ಸಂಘ ಶಿವಮೊಗ್ಗದ ಎಂ.ಕೆ. ಇಂದಿರಾ ಪ್ರಶಸ್ತಿ ಹಾಗೂ ಸಿರಸಿಯ ಬಿ. ಎಚ್. ಶ್ರೀಧರ ಸಾಹಿತ್ಯ ಪ್ರಶಸ್ತಿ, ನನ್ನವರ ಹಾಡು ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಪ್ರಶಸ್ತಿ, ಹೊಸದಿಕ್ಕು ವಿಮರ್ಶಾ ಕೃತಿಗೆ ಕಾವ್ಯಾನಂದ ಪ್ರಶಸ್ತಿ, ವಚನ ಚಳವಳಿ ವಿಮರ್ಶಾ ಕೃತಿಗೆ ರತ್ನಾಕರವರ್ಣಿ ಮುದ್ದಣ್ಣ ಪ್ರಶಸ್ತಿ, ನಾಕು ಬೀದಿ ನಾಟಕಗಳು ಗೊರೂರು ಪ್ರಶಸ್ತಿ ಮತ್ತು ಕೆಂಡ ಸಂಪಿಗೆ ಕವನ ಸಂಕಲನಕ್ಕೆ ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ.

ಸ್ತ್ರೀಪರವಾದ ಆಲೋಚನೆಗಳು ಇವರ ಬರವಣಿಗೆಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಸ್ತ್ರೀಯ ಆಲೋಚನೆಗಳು, ಗಂಡು–ಹೆಣ್ಣಿನ ಸಂಬಂಧಗಳು, ಸ್ತ್ರೀಯ ಮನಸ್ಥಿತಿ, ಬದುಕಿನ ಕ್ರಮ, ದೇವರ ಪಾತ್ರದ ಮೂಲಕ ಮಾನವನ ಸ್ಥಿತಿಗತಿಗಳನ್ನು ಮನೋಜ್ಞವಾಗಿ ವಿವರಿಸಿದ್ದಾರೆ.

### ಅಧ್ಯಯನ ಗ್ರಂಥಗಳು


1. ನಾ ಬರುತ್ತೇನೆ ಕೇಳು– ಕವನ ಸಂಕಲನ – ಸವಿತಾ ನಾಗಭೂಷಣ್
2. ಹೊಳೆಮಗಳು – ಕವನ ಸಂಕಲನ – ಸವಿತಾ ನಾಗಭೂಷಣ್
3. ಜಾತ್ರೆಯಲ್ಲಿ ಶಿವ – ಕವನ ಸಂಕಲನ – ಸವಿತಾ ನಾಗಭೂಷಣ್
4. 'ಅವ್ವ ಮತ್ತು ಇತರ ಕತೆಗಳು' - ಕಥಾ ಸಂಕಲನ – ಡಾ. ಗೀತಾ ನಾಗಭೂಷಣ್
5. ಅಂತರ್ ಜಾಲ ಮಾಹಿತಿ